doc-597
T.P-2

Reg No B G 155

29 11 72*

n The S'ate First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸ್ವತಂತ್ರ
ಮಹೋನ್ನತ
ಸರ್ವೋದಯ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಹೊಟೇಲ್ ಕೆಲಸಗಾರರ ವೇತನ ಕಟ್ಟುನಿಟ್ಟಾಗಿ ಜಾರಿ ಆಗಬೇಕು

ಮೈಸೂರು ಪಿ. ಡಬ್ಲ್ಯು. ಡಿ.

ಟೆಂಡರ್‌ಪ್ರಕಟಣೆ

ನಂ. 26/72-73 ತಾ॥ 13-11-1972

ಈ ಕೆಳಗೆ ಕಂಡ ಕೆಲಸಗಳಿಗಾಗಿ ಕಾಲಂ ನಂ. 4 ರಲ್ಲಿ ನಮೂದಿಸಿರುವ ಸೂಕ್ತ ವರ್ಗದ ರಿಜಿಸ್ಟರ್‌ಆದ ಕಂಟ್ರಾಕ್ಟರುಗಳಿಂದ ವಿಧಾಯಕವಾದ ಫಾರಂಗಳಲ್ಲಿ ದ್ವಿಪ್ರತಿಗಳಲ್ಲಿ ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ ಮತ್ತು 4-12-1972 ನೇ ಸೋಮವಾರ ಮಧ್ಯಾಹ್ನ 4ಗಂಟೆ ವರೆಗೆ, ಚಾಮರಾಜನಗರದಲ್ಲಿರುವ. ಚಾಮರಾಜನಗರ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್ ರವರಿಂದ ಸ್ವೀಕರಿಸಲ್ಪಡುವುವು. ಸಾಧ್ಯವಾದರೆ ಅದೇ ದಿನ, ಹಾಜರಿರಬಯಸುವ ಟೆಂಡರ್‌ದಾರರಿದುರು ಅಥವಾ ಅವರ ಪ್ರತಿನಿಧಿಗಳ ಎದುರು ಅವನ್ನು ಒಡೆಯಲಾಗುವುದು. 29-11-1972 ರಿಂದ 2-12-1972 ರವರೆಗೆ ಕೆಲಸದ ಎಲ್ಲಾ ದಿನಗಳಲ್ಲೂ ಕೆಲಸದ ವೇಳೆಗಳಲ್ಲಿ ಫಾರಂ ಮಾರಾಟಕ್ಕೆ ವಿಧಾಯಕವಾಗಿರುವ (ವಾಪಸ್ಸು ಮಾಡಲಾಗದ) ಹಣವನ್ನು ಪಾವತಿ ಮಾಡಿದಲ್ಲಿ ಖಾಲಿ ಟೆಂಡರು ಫಾರಂಗಳನ್ನು ಕೊಡಲಾಗುವುದು ಯಾವುದೇ ಕಾರಣಗಳನ್ನು ಕೊಡದೆ ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನು ನಿರಾಕರಿಸುವ ಹಕ್ಕು ತಕ್ಕ ಅಧಿಕಾರಿಗಳಿಗೆ ವಿಾಸಲಾಗಿದೆ. ಕೆಲಸದ ಎಲ್ಲಾ ದಿನಗಳಲ್ಲೂ ಕಛೇರಿ ವೇಳೆಗಳಲ್ಲಿ, ಚಾಮರಾಜನಗರದಲ್ಲಿರುವ ಚಾಮರಾಜನಗರ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರ ಕಚೇರಿಯಲ್ಲಿ ಹೆಚ್ಚು ವಿವರಗಳನ್ನು ಪಡೆಯಬಹುದು

ಕೆಲಸದ ಹೆಸರು	ಟೆಂಡರಿಗೆ ಇಟ್ಟಿರುವ ಅಂದಾಜು ಮೊತ್ತ	ಇ ಎಂ. ಡಿ.	ಟೆಂಡರ್ ಸಲ್ಲಿಸಬಹುದಾದ ಕಂಟ್ರಾಕ್ಟರ್ ವರ್ಗ	ಟೆಂಡರ್ ಫಾರಂಗಳ ದರ	ಮುಗಿಸಲು ಕಾಲಾವಧಿ
1. ಅರಸೀಕೆರೆ ಚಾಮರಾಜನಗರ ರಸ್ತೆಯಲ್ಲಿ 197.2 ಕೆಎಂನಲ್ಲಿ ಕಟ್ಟೆ ಹಳ್ಳದ ಅಡ್ಡಲಾಗಿ ಒಂದು ಸೇತುವೆ ಪುನರ್ನಿರ್ಮಾಣಮಾಡುವುದು	ರೂ. 93000/-	ರೂ. 2325/-	3 ಮತ್ತು ಮೇಲ್ಪಟ್ಟು	ರೂ 5-15	15 ತಿಂಗಳು (ಮಳೆಗಾಲ ಬಿಟ್ಟು)

ವಿ ಸೂ.- (1) ಯಾವ ಕಾರಣವನ್ನೂ ಕೊಡದೆ, ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನೂ ನಿರಾಕರಿಸುವ ಹಕ್ಕು ತಕ್ಕ ಅಧಿಕಾರಿಗಳಿಗೆ ವಿಾಸಲಾಗಿದೆ.

(2) ಅಂದಾಜು ವಿವರ, ಕಂಟ್ರಾಕ್ಟು ಪತ್ರಗಳು ಇತ್ಯಾದಿಗಳನ್ನು, ಕಛೇರಿ ವೇಳೆಗಳಲ್ಲಿ, ಚಾಮರಾಜನಗರ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರ ಕಛೇರಿಯಲ್ಲಿ ಪಡೆಯಬಹುದು.

(3) ಟೆಂಡರ್ ಕಂಟ್ರಾಕ್ಟರರು ಟೆಂಡರ್ ಫಾರಂಗಳ ಜೊತೆಯಲ್ಲಿ ಚಾಲ್ತಿ ವರ್ಷಕ್ಕೆ ರಿಜಿಸ್ಟ್ರೇಷನ್‌ನ ವಾಡಿದ ಸರ್ಟಿಫಿಕೇಟನ್ನು ಇಟ್ಟಿರಬೇಕು.

ಕೆ. ಶ್ರೀನಿವಾಸಮೂರ್ತಿ
ಎಕ್ಸಿಕ್ಯುಟಿವ್ ಇಂಜಿನಿಯರ್
ಚಾಮರಾಜನಗರ ವಿಭಾಗ

ಈ ಹುಚ್ಚು ನೋಡಿ !

ಹಗ್ಲಾಸ್— " ನೀವು ಭೇಟಿಮಾಡಬೇಕಾದ ಸೊಗಸಾದ ಹುಡುಗ " ಎಂದು ವಿವರಿಸಲ್ಪಟ್ಟಿದ್ದ ಒಬ್ಬ ಯುವಕ ಅನರ್ಹ ವಿದ್ಯಾರ್ಥಿಯು, ಕೊಲೆ ಮಾಡಿದಾಗ ಅವನ ಮನೋಭಾವನೆ ಹೇಗಿರತ್ತದೆಂಬುದನ್ನು ತಿಳಿಯಬೇಕೆಂಬ ಆಶಯದಿಂದ ತನ್ನ ತಂದೆ ತಾಯಿಗಳನ್ನು ಕೊಂದನು !

ಕಾರ್ಮಿಕ ಪಚಿವರಲ್ಲಿ ಮನವಿ

ಹುಬ್ಬಳ್ಳಿ— ಹೋಟಲುಗಳಲ್ಲಿ ಕನಿಷ್ಟ ವೇತನಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತಾಬೇಕೆಂದು ಹೋಟಲು ಕೆಲಸಗಾರರು ಕಾರ್ಮಿಕ ಮಂತ್ರಿ ಶ್ರೀ ಅಜೀಜ್ ಸೇಟ್‌ರವರಲ್ಲಿ ಮನವಿ ಅರ್ಪಿಸಿದರು : ಅವರು ಪರಿಶೀಲಿಸುವುದಾಗಿ ಭರವಸೆಇತ್ತರು.

★

ಜಾನುವಾರುಗಳ ನರ್ಗಾವಣೆ

ಭಾವನಗರದಿಂದ ಜಾನುವಾರುಗಳನ್ನು ಸಾಮೂಹಿಕವಾಗಿ ಸೂರತ್ ಜಿಲ್ಲಾ ವ್ಯಾಗಿಗೆ ರೈಲು ಮತ್ತು ದೋಣಿಗಳಲ್ಲಿ ಸಾಗಿಸಲಾಗುವುದೆಂದು ಪ್ರಕಟವಾಗಿದೆ.

○

ಮದುವೆ ವಯಸ್ಸು ಏರಿಕೆ

ಕಲ್ಕತ್ತಾ— ಭಾರತ ಮಹಿಳೆಯರ ವಿವಾಹ ವಯಸ್ಸನ್ನು 21 ವರ್ಷಕ್ಕೆ ಏರಿಸುವುದರಿಂದ ದೇಶದಲ್ಲಿ ಜನಸಂಖ್ಯೆ ಬಹುಮಟ್ಟಿಗೆ ತಗ್ಗುವುದೆಂದು ಭಾರತದ ಅಂಕಿಅಂಶ ಸಂಸ್ಥೆಯ ಶ್ರೀ ಚಿತ್ತರಂಜನ್ ಮಾಲೇಕರ್ ಹೇಳಿದರು.

●

ಅಕ್ಕಿ ವಾಪಾರ ಸರ್ಕಾರ ಕೈಗೊಂಡರೆ

ನವದೆಹಲಿ— ದೇಶದಲ್ಲಿ ಬೆಲೆ ಏರ್ಪಾಡು ವಿರೂಪಗೊಳ್ಳದಿರಲು, ಮೈಸೂರು ಸರಕಾರ ಭತ್ತ ಪಡೆಯುವ ಬೆಲೆ ಹೆಚ್ಚಿಸಲು ಒಪ್ಪಲಿಲ್ಲ ; ಆದರೆ ರಾಜ್ಯವು ಅಕ್ಕಿ ವ್ಯಾಪಾರ ಕೈಗೊಂಡರೆ ಕೇಂದ್ರವು ಎಲ್ಲ ಸಹಾಯವನ್ನೂ ನೀಡುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಬಿಗಿ ಪರಾಯಿ, ತುಂಡು ಲಂಗ !

ನವದೆಹಲಿ— ಯೌವನಸ್ಥರು ಬಿಗಿ ಪರಾಯಿ, ತುಂಡು ಲಂಗ ಧರಿಸುವ ವಿಚಾರದಲ್ಲಿ ಸರಕಾರ ಯಾವ ರೀತಿಯಲ್ಲೂ ಕೈ ಹಾಕುವುದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಅಭಾವ ಪರಿಸ್ಥಿತಿ ಸ್ವತಃ ನೋಡಲು

ಬೆಂಗಳೂರು— ಶಾಸನಸಭಾ ಸದಸ್ಯರು ಕೆಲವರಿರುವ ಸಮಿತಿಯನ್ನು ರಾಜ್ಯದ ಉತ್ತರ ಭಾಗದಲ್ಲಿಯ ಅಭಾವ ಪೀಡಿತ ಭಾಗಗಳಲ್ಲಿಯ ಪರಿಸ್ಥಿತಿಯನ್ನು ಅಲ್ಲೇ ವ್ಯಾಸಂಗ ಮಾಡುವ ಬಗ್ಗೆ ಸರಕಾರದ ಭರವಸೆ ಪಡೆಯಲು ವಿರೋಧ ಸದಸ್ಯರುಗಳಾಟಿ ಕೂಡಿದ ಧರಣ ನಡೆಸಿದರು.

★

ಚಲನಚಿತ್ರಗಳಿಗೆ ಧನ ಸಹಾಯ

ಬೆಂಗಳೂರು— 1970 ರಲ್ಲಿ 32 ಚಲಚ್ಚಿತ್ರಗಳಿಗೂ, 71-72 ರಲ್ಲಿ- 33 ಚಲಚ್ಚಿತ್ರಗಳಿಗೂ ಸರಕಾರ ಧನಸಹಾಯ ನೀಡಿದೆಯೆಂದೂ, ಈ ಪೈಕಿ ಒಂದು ತೆಲುಗು, ಎರಡು ತುಳು, ಎರಡು ಮಲೆಯಾಳಿ ಚಿತ್ರಗಳೆಂದೂ ಶಾಸನ ಸಭೆಯಲ್ಲಿ ತಿಳಿಸಲಾಯಿತು.

★

ನಮ್ಮ ಆತ್ಮ ರಕ್ಷಿಸಿ

ಬೆಂಗಳೂರು— ಉತ್ತರ ಕರ್ನಾಟಕದಲ್ಲಿ ಅಭಾವ ಪರಿಹಾರ ಕಾರ್ಯಗಳನ್ನು ಮುಂದಿನ ವರ್ಷ ಮಾರ್ಚಿವರೆಗೆ ನಡೆಸಲು ಅನುಕೂಲಿಸುವಂತೆ, ಕೇಂದ್ರವು ರೂ. 29 ಕೋಟಿ ಮಂಜೂರ್ಮಾಡಲು, ನಮ್ಮ ಆತ್ಮ ರಕ್ಷಿಸಿ ಓಲೆಯನ್ನು ಕೇಂದ್ರಕ್ಕೆ ಕಳುಹಿಸಲಾಗಿದೆ ಎಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

○

ಉಚಿತ ಒಣಹುಲ್ಲು

ಬೆಂಗಳೂರು— ಅಭಾವಪೀಡಿತ ಗುಲ್ಬರ್ಗಾ ಭಾಗಗಳಿಗೆ 3 ತಿಂಗಳೊಳಗೆ 1000 ಟ್ರಕ್ ಹೊರೆ ಒಣಹುಲ್ಲನ್ನು ಕಳುಹಿಸುವದಾಗಿ ಮಂಡ್ಯ ಜಿಲ್ಲಾಧಿಕಾರಿಗಳು ಭರವಸೆ ನೀಡಿದ್ದಾರೆ.

★ ಬೆಂಗಳೂರಿಗೆ ಕಾವೇರಿ ನೀರು ಮುಂದಿನ ಡಿಸೆಂಬರಿನೊಳಗೆ ಸರಬರಾಜಾಗಬಹುದೆಂದು ನೀರು ಸರಬರಾಜು ಮಂಡಲಿ ಅಧ್ಯಕ್ಷರು ಪತ್ರಿಕೆಯವರಿಗೆ ತಿಳಿಸಿದರು.

ಪುಡ್‌ಲ್ಯಾಂಡ್ ಆಮೋಘ 9 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10-30 ಸತಿ ಶಕ್ತಿ

ಅಪೆರಾ 2 ನೇ ವಾರ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಶಾದಿ ಕೆ ಬಾದ್

ಪಾತ್ರ : ಜಿತೇಂದ್ರ, ರಾಖಿ, ಶತ್ರುಘ್ನಸಿನ್ಹ, ನಾಜ್ ಮತ್ತು ಶ್ಯಾಮ

ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು



Protect the Cow

Help The Gorakshana

— Humanitarian Propoganda Monthly....

Edited Printedand Published by Dharmapracharanirata M S Krishna Rao (Propretor) at the Satyavad Press, Chamarajapuram Mysore

ಮೈಸೂರು ಪ್ರದರ್ಶನ ಮಂಟಪ

ನವದೆಹಲಿಯಲ್ಲಿನ ಏಷ್ಯಾ 72 ಅಂತರಾಷ್ಟ್ರೀಯ ಮೇಳದಲ್ಲಿ ಮೈಸೂರು ಪ್ರದರ್ಶನ ಮಂಡಪ ತನ್ನ ಪ್ರದರ್ಶನ ವೈಭವಕ್ಕೆ ಒಂದು ಜೀವಂತ ಸಾಕ್ಷಿ. ಈ ಮಂಟಪದಲ್ಲಿ ಪ್ರದರ್ಶಿತವಾಗಿರುವ ಕೆಲವು ಕಲಾಕೃತಿಗಳು ರಾಜ್ಯದ ಕಲೆ ಮತ್ತು ಸಂಸ್ಕೃತಿಯ ಶ್ರೀಮಂತಿಕೆಯನ್ನು ವಿತ್ತ ತೋರಿಸುತ್ತಿವೆ.

ಮಕ್ಕಳ ದಿನಾಚರಣೆ

ಮಕ್ಕಳ ನಾಟಕೋತ್ಸವ ಉದ್ಘಾಟಿಸುತ್ತಾ, ವಾರ್ತಾ ಮತ್ತು ಯೋಜನಾ ಖಾತೆಯ ರಾಜ್ಯ ಸಚಿವ ಶ್ರೀ ದೇವೇಂದ್ರಪ್ಪ ಘಾಲಸ್ಪೈನವರು ಮಾಡಿದ ಭಾಷಣದಲ್ಲಿಯ ಕೆಲವು ವಿಷಯಗಳು— ಮಕ್ಕಳ ಮನೋಭೂಮಿಕೆಯಲ್ಲಿ ಪ್ರಯತ್ನಶೀಲತೆ, ಪ್ರಾಮಾಣಿಕತೆ ಮತ್ತು ಸಾಹಸ ಪ್ರವೃತ್ತಿಗಳನ್ನು ಮೂಡಿಸಬೇಕು – ಮಕ್ಕಳು ಮಾನವಲೋಕದ ಪುಷ್ಪಗಳು ಎಂದು ಒಬ್ಬ ಕವಿ ಹೇಳಿದ್ದಾನೆ ; ಮಕ್ಕಳಿದ್ದರೆ ಮನೆ ಚೆಂದ, ರೊಕ್ಕ ಇದ್ದರೆ ಸಂತೆ ಚೆಂದ ಎಂದು ನಮ್ಮ ಜಾನಪದ ಕವಿಗಳು ಹೇಳಿದ್ದಾರೆ, ಈ ಮಾತುಗಳಲ್ಲಿ ತುಂಬಾ ಅರ್ಥವಿದೆ – ಮಕ್ಕಳು ರಾಷ್ಟ್ರದ ಭವಿಷ್ಯದ ಆಧಾರ ಸ್ತಂಭಗಳೆಂದುಮಹಾಪ್ರಧಾನಿಗಳಾಗಿದ್ದ ದಿ॥ ಜವಾಹರಲಾಲ್ ನೆಹ್ರೂರವರು ಯಾವಾಗಲೂ ಹೇಳುತ್ತಿದ್ದರು ; ಮಕ್ಕಳು ನಕ್ಕರೆ ರಾಷ್ಟ್ರವೇ ನಕ್ಕಂತೆ ಎಂಬ ನಂಬಿಕೆ ಜವಾಹರಲಾಲ್ ನೆಹ್ರೂರವರದು.

ಹೊಸ ರೀತಿ ರೇಡಿಯೇಷನ್ನಿಂದ

ಬೊಂಬಾಯಿ— 1 ವಾರದಿಂದ 2 ವರ್ಷಗಳವರೆಗೆ ಮೀನು, ಆಲೂಗಡ್ಡೆ, ಈರುಳ್ಳಿ, ಬಾಳೇಹಣ್ಣು, ಮಾವಿನಹಣ್ಣು, ಗೋಧಿ ಮುಂತಾದ ಆಹಾರ ಪದಾರ್ಥಗಳು ಕೆಡದಂತೆ ಕಾಪಾಡುವ ಹೊಸ ರೀತಿ ರೇಡಿಯೇಷನ್ನನ್ನು ಬಾಬಾ ಅಣು ಸಂಶೋಧನ ಸಂಸ್ಥೆ ಅಭಿವೃದ್ಧಿಗೊಳಿಸಿದೆ.

○★●★○

ಅದ್ಭುತ ಕಂಪ್ಯೂಟರ್

ಹಾಂಕಾಂಗ್— ಸೆಕೆಂಡಿಗೆ 110000 ಲೆಖ್ಖಾಚಾರ ಮಾಡುವ ಕಂಪ್ಯೂಟರನ್ನು ಚೀನಾ ಅಭಿವೃದ್ಧಿಗೊಳಿಸಿರುವದೆಂದು ಚೀನಾ ವಾರ್ತಾ ಸಂಸ್ಥೆ ತಿಳಿಸಿದೆ.

SHAKTI SUDHA

A Superb Tonic

ಭಾರತದಲ್ಲಿ ಗೋವಧೆ ಪೂರ್ಣ ನಿಷೇಧವಾಗಲಿ

Quality Printing Neat Binding

Lakshminarasimha Press

Sivarampet, Mysore